ದಿನಾಂಕಃ 28.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಆದರೆ ಇಂಗ್ಲೀಷ್ ಅಷ್ಟೊಂದು ಸ್ಪಷ್ಟವಾಗಿ ಓದಲು ಬರೆಯಲು ಬರುವುದಿಲ್ಲ. ದಾವಾ ಆಸ್ತಿಗಳ ಸಿ ಟಿ ಎಸ್ ಉತಾರೆಗಳನ್ನು ತೆಗೆಸಿಕೊಂಡು ಬಂದು ಅವುಗಳ ಬಗ್ಗೆ ತಿಳಿದುಕೊಂಡು ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ದಾವಾ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ.

ಹೊನ್ನಪ್ಪ ಬಾಬಾಜೆಪ್ಪಾ ಸುಪಲಿ ಎನ್ನುವ ವ್ಯಕ್ತಿ ದಾವಾ ಆಸ್ತಿಗಳನ್ನು ಖರೀದಿಸಿರುತ್ತಾನೆಂದರೆ ನಿಜ. ಸದರಿ ಹೊನ್ನಪ್ಪ ತೀರಿಕೊಂಡ ನಂತರ ದಶರಥ ಹೊನ್ನಪ್ಪ ಸುಪಲಿ ರವರ ಹೆಸರಿಗೆ ದಾಖಲು ಆಗಿರುತ್ತವೆ. ಸದರಿ ಹೊನ್ನಪ್ಪ ದಿ.30.05.1984 ರಂದು ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ಸಂಗತಿ ನನಗೆ ಗೊತ್ತಿರುತ್ತದೆ. ಆ ಸಮಯದಲ್ಲಿ ನಾನು ವಯಸ್ಕನಾಗಿದ್ದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಅವರ ಮನೆಯಲ್ಲಿಯೇ ವಾಸವಾಗಿದ್ದೆ ಎಂದು ನುಡಿಯುತ್ತಾರೆ. ಸದರಿ ಹೊನ್ನಪ್ಪ ತೀರಿಕೊಂಡ ನಂತರ ದಾವಾ ಆಸ್ತಿಗಳಲ್ಲಿ ನಮ್ಮ ತಾಯಿಗೂ ಪಾಲು ಇರುತ್ತದೆಂದು ನಾನು ದಾವೆ ಹಾಕಿರಲಿಲ್ಲ.

ನನ್ನ ತಾಯಿ ಗೋದುಬಾಯಿ ಹೊನ್ನಪ್ಪ ತೀರಿಕೊಳ್ಳುವುದಕ್ಕಿಂತ ಮುಂಚೆ ಅಂದರೆ ಸನ್ 1976 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಗಳಲ್ಲಿ ಹೊನ್ನಪ್ಪನನ್ನು ಪಾಲು ಕೊಡುವಂತೆ ಕೇಳಿರುವುದಿಲ್ಲ ಏಕೆಂದರೆ ಸದರಿ ಹೊನ್ನಪ್ಪನೇ ನನ್ನ ತಾಯಿ ತೀರಿಕೊಂಡ ನಂತರ ನನ್ನನ್ನು ಪಾಲನೆ ಪೋಷಣೆ ಮಾಡಿರುತ್ತಾನೆ.

ಪ್ರಸ್ತುತ ದಾವೆ ಸಲ್ಲಿಸುವದಕ್ಕಿಂತ ಪೂರ್ವದಲ್ಲಿ 1ನೇ ಪ್ರತಿವಾದಿ ವಕೀಲರ ಮೂಲಕ ನೋಟೀಸು ನೀಡಿದ್ದನು ಎಂದರೆ ನಿಜ. ಸದರಿ ನೋಟೀಸಿಗೆ ನಾನು ಉತ್ತರವನ್ನು ನೀಡಿರುವುದಿಲ್ಲ.

ದಾವಾ ಆಸ್ತಿ ಸಿ ಟಿ ಎಸ್ ನಂಬರ 2161 ನೇದ್ದರಲ್ಲಿ ಒಂದು ಖಾರಾ ಕುಟ್ಟುವ ಮಸೀನು ಇರುತ್ತದೆ. ಸದರಿ ಖಾರಾ ಕುಟ್ಟುವ ಮಸೀನಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯ ಮಗ ಸಂಜಯ ಇತನು ಪರವಾನಿಗೆ ಪಡೆದಿದ್ದು, ಸದರಿ ಆಸ್ತಿಯು ನನಗೆ ಸಂಬಂಧಿಸಿರುತ್ತದೆಂದು ನಾನು ಡಿವಿಜನಲ್ ಕಮೀಶನರ್, ಬೆಳಗಾವಿರವರಿಗೆ ಖಾರಾ ಕುಟ್ಟುವ ಮಸೀನಿನ ಪರವಾನಿಗೆಯನ್ನು ರದ್ದುಪಡಿಸುವಂತೆ ತಕರಾರು ಸಲ್ಲಿಸಿದ್ದೆನು ಎಂದರೆ ನಿಜ. ಸದರಿ ತಕರಾರಿನ ಮೇರೆಗೆ ಪೌರಾಯುಕ್ತರು ನಗರಸಭೆ, ಗೋಕಾಕ ಹಾಗೂ ಡಿಸಿ ಬೆಳಗಾವಿಯವರು ಪಂಚನಾಮೆ ಮಾಡಿ ವರದಿ ನೀಡಿರುತ್ತಾರೆಂದರೆ ನಿಜ. ಸದರೀಯವರು ತಮ್ಮ ವರದಿಯಲ್ಲಿ ಮೇಲೆ ಹೇಳಿದ ಆಸ್ತಿಗೆ ನಾನು ಮಾಲೀಕ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟು ನಾನು ಸಲ್ಲಿಸಿದ ತಕರಾರನ್ನು ವಿಲೇವಾರಿ ಮಾಡಿರುತ್ತಾರೆಂದರೆ ನಿಜ. ಸದರಿ ಆದೇಶವು ಸನ್ 2006-07 ರಲ್ಲಿ ಆದ ನಂತರ ದಾವಾ ಆಸ್ತಿಗಳಲ್ಲಿ ನನ್ನ ಹಿಸ್ಸೆ ಇರುತ್ತದೆಂದು ನಾನು ದಾವೆಯನ್ನು ಸಲ್ಲಿಸಿರಲಿಲ್ಲ.

ಯಶೋದಾ ಸುಭಾಸ ಗುರ್ಲಹೊಸೂರ ಇವರು ಧಾರವಾಡದಲ್ಲಿ ವಾಸವಾಗಿದ್ದು, ನಂತರ ಕಲಘಟಗಿ ತಾಲ್ಲೂಕಿನ ಹೂಲಿಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದರು. ಸದರೀಯವರು ನನ್ನ ತಾಯಿಯ ಸಹೋದರಿ ಅಂದರೆ ನನಗೆ ಚಿಕ್ಕಮ್ಮನಾಗಬೇಕು. ನಮ್ಮ ಇನ್ನೊಬ್ಬ ಚಿಕ್ಕಮ್ಮ ಜೀಜಾಬಾಯಿ ಜೊತೆ ನನ್ನ ಒಡನಾಟ ಹೆಚ್ಚಿಗೆ ಇರುತ್ತದೆಂದರೆ ನಿಜ. ಸದರಿ ಒಡನಾಟದಿಂದ ಅವರ ಮನೆಯ ವಿಚಾರಗಳು ನಮಗೆ ಹಾಗೂ ನಮ್ಮ ಮನೆಯ ವಿಚಾರಗಳು ಅವರಿಗೆ ಗೊತ್ತಾಗುತ್ತಿದ್ದವು ಎಂದರೆ ನಿಜ. ಸದರೀಯವರು ಏನಾದರೂ ವ್ಯವಹಾರ

ಮಾಡಬೇಕಾದರೆ ನನ್ನನ್ನು ಕೇಳುತ್ತಿದ್ದರು ಎಂದರೆ ನಿಜ. ಸದರೀಯವರು ಧಾರವಾಡದಲ್ಲಿ ವಾಸವಾಗಿದ್ದರಿಂದ ಗೋಕಾಕದಲ್ಲಿ ಏನಾದರೂ ವ್ಯವಹಾರ ಮಾಡಬೇಕಾದರೆ ನನ್ನನ್ನು ಕೇಳಿ ವ್ಯವಹಾರ ಮಾಡುತ್ತಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ಜೊತೆ ಸಂಬಂಧ ಚೆನ್ನಾಗಿರುವ ಸಮಯದಲ್ಲಿ ಕೇಳುತ್ತಿದ್ದರು ಆದರೆ ಅವರಿಗೆ ಮತ್ತು ನನಗೆ ಹಣದ ತಕರಾರು ಬಂದ ನಂತರ ನನ್ನನ್ನು ಕೇಳುವುದನ್ನು ನಿಲ್ಲಿಸಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ